ಶ್ರೀ ವಿ. ಎಂ. ಘಾಡಿ : – ಎರಡನೆಯ ಪ್ರಶ್ನೆಗೆ ವರ್ಗಾಯಿಸಲು ಆತಂಕವಿದೆ ಯೆಂದು ತಿಳಿಸಲಾಗಿದೆ. ಯಾವ ಆತಂಕವಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ: —1947ರಲ್ಲಿ ಯೂವ ಬಾಂಬೆ ಪ್ರೈಮರಿ ಎಜುಕೇಷನ್ ಆಕ್ಟ್ ಮತ್ತು 1949 ರಲ್ಲಿ ಯೂವ ರೂಲ್ಸ್ ಇತ್ತೋ ಅದರ ಕೆಳಗೆ ಅವರನ್ನು ನೇಮಕ ಮೂಡಿದೆ. 1969 ರಲ್ಲಿ ಮೈಸೂರು ಆಕ್ಟ್ ನಂ. 18ನ್ನು ಮೂಡಿ ಬಾಂಬೆ ಪ್ರೈಮರಿ ಎಜುಕೇಷನ್ ಆಕ್ಟ್ ಮತ್ತು ರೂಲ್ಸನ್ನು ರಿಪೀಲ್ ಮೂಡಲಾಗಿದೆ. ಹಾಗೆ ಮೂಡಿ 6ನೆಯ ಸೆಕ್ಷನ್ ಪ್ರಕಾರ ರಕ್ಷಣೆ ನೀಡಿದೆ. ಸೆಕ್ಷನ್ 6ರ ಪ್ರಕಾರ ಆವರು ಹಿಂದೆ ಆಯ್ಕೆ ಮೂಡಲ್ಪಟ್ಟಿದ್ದರೂ ಬಾಂಬೆ ಆಕ್ಟನ್ನು ರಿಪೀಲ್ ಮೂಡಿದ್ದರೂ ಅವರ ಹಕ್ಕು ಅಬ್ಲಿಗೇಷನ್, ಲಯಬಿಲಿಟಿ ಮುಂತಾದುವು ಗಳಿಗೆ ಅಫೆಕ್ಟಾಗುವುದಿಲ್ಲ. ಅವರನ್ನು ತೆಗೆಯುವುದಕ್ಕೆ ಬರುವುದಿಲ್ಲ.

ಶ್ರೀ ವಿ. ಎಂ ಘಾಡಿ:– ಇರುವ ಆತಂಕವನ್ನು ದೂರ ಮೂಡಲು ಇನ್ನೂ ಎಷ್ಟು ದಿವಸ ಬೇಕು? ಈ ವಿಷಯ ಪರಿಶೀಲನೆಯಲ್ಲಿದೆಯೆಂದು 1972ರಿಂದಲೂ ಹೇಳುತ್ತಲೇ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಹಿಂದಿನ ವಿಚಾರ ನನಗೆ ಗೊತ್ತಿಲ್ಲ. ಈಗ ಈ ವಿಷಯವನ್ನು ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ.

* *Introduction of Rationing System*

283. SRI J. L. KABADE (Ballolli)—Will the Minister for Food and Civil Supplies be pleased to state :—

(a) whether an announcement was made that the rationing will be introduced in the cities having more than a lakh population in the State;

(b) the reasons for not introducing rationing in Bijapur City where population is more than a lakh;

(c) the cities in the State where rationing has been introduced and their population;

(d) the names of cities in which rationing has been introduced, if any, where the population is less then a lakh ?

SMT. E. E. VAZ (Minister for Food and Civil Supplies).—

(a) Yes. It has been decided to extend the rationing by stages in accordance with the stock position of food-grains.

(b) Informal rationing will be implemented stage by stage.

| (c) | *Cities* | *Population (Approx)* |
|---|---|---|
| 1. | Bangalore | 16.35 lakhs |
| 2. | K.G.F. | 1-18 do |
| 3. | Mangalore | 2-15 do |
| 4. | Hubli-Dharwar | 3-79 do |
| 5. | Gadag-Betageri | 1-02 do |
| 6. | Belgaum | 2-13 do |
| 7. | Mysore | 3-55 do |

(*d*) No such cities

ಶ್ರೀ ಜೆ. ಎಲ್. ಕಬಾಡಿ.—ಜನಸಂಖ್ಯೆ ಆಧಾರದ ಮೇಲೆ ದೇಶದಲ್ಲಿ ಪಡಿತರ ಪದ್ಧತಿಯನ್ನು ಜಾರಿಗೆ ತರಲಾಗಿದೆ, ಹಂತಹಂತವಾಗಿ ಜಾರಿಗೆ ತರಲಾಗುವುದು ಎಂದು ಉತ್ತರ ಕೊಡಲಾಗಿದೆ. ಯಾವ ಸೆನ್ಸಸ್ ಪ್ರಕಾರ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ?

* ಶ್ರೀಮತಿ ಇ. ಇವಾಜ್.—1971ರ ಸೆನ್ಸಸ್ ಪ್ರಕಾರ ತೆಗೆದು ಕೊಂಡಿದೆ.

ಶ್ರೀ ಜೆ. ಎಲ್. ಕಬಾಡಿ.—1971ರ ಸೆನ್ಸಸ್ ಪ್ರಕಾರ ನೋಡಿದರೆ ಕೆ ಜಿ. ಎಫ್.ನಲ್ಲಿ 76112 ಜನರಿದ್ದಾರೆ, ಗದಗ್ ಬೆಟಗೇರಿಯಲ್ಲಿ 94426 ಜನರಿದ್ದಾರೆ. ಇದು ನಿಜವಲ್ಲವೇ ? ಹಾಗಾದರೆ ಒಂದು ಲಕ್ಷಕ್ಕೆ ಮೇಲ್ಪಟ್ಟು ಜನಸಂಖ್ಯೆ ಅಲ್ಲಿ ಇಲ್ಲದಿದ್ದರೂ ಹೇಗೆ ಪಡಿತರ ಪದ್ಧತಿಯನ್ನು ಅಲ್ಲಿ ಜಾರಿಗೆ ತಂದಿರಿ ?

ಶ್ರೀಮತಿ ಇ. ಇವಾಜ್....ನಮ್ಮ ಅಂಕಿ ಅಂಶದ ಪ್ರಕಾರ ಕೆ. ಜಿ. ಎಫ್‌ನಲ್ಲಿ 1 ಲಕ್ಷದ 18 ಸಾವಿರ ಜನರಿದ್ದಾರೆ, ಗದಗ ಬೆಟಗೇರಿಯಲ್ಲಿ 1 ಲಕ್ಷದ 2 ಸಾವಿರ ಜನರಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಕರ್ನಾಟಕದಲ್ಲಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಪಡಿತರ ಪದ್ಧತಿಯನ್ನು ಕಾರ್ಯರೂಪಕ್ಕೆ ತರಲಾಗುವುದೆಂದು ಘೋಷಿಸಲಾಗಿದೆ ಎಂದು ಉತ್ತರಿಸಲಾಗಿದೆ. 1971ರ ಸೆನ್ಸಸ್ ಪ್ರಕಾರ ಗದಗ್‌ನಲ್ಲಿ ಜನಸಂಖ್ಯೆ ಕಡಿಮೆ ಇದೆ, ಕೆ. ಜಿ. ಎಫ್‌ನಲ್ಲಿ ಕಡಮೆ ಇದೆ. ಆದರೂ ಕೂಡ ಅಲ್ಲಿ ಹೇಗೆ ಪಡಿತರ ಪದ್ಧತಿ ಜಾರಿಗೆ ತರಲಾಗಿದೆ ?

ಶ್ರೀಮತಿ ಇ. ಇವಾಜ್.—ಕೆಲವು ಕಡೆ ಕಾರ್ಮಿಕರು ಹೆಚ್ಚಾಗಿರುವುದರಿಂದ ಅಲ್ಲಿ ತರಲಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಉತ್ತರ ಸ್ಪಷ್ಟವಾಗಿದೆ. ಅಪ್ರೋಕ್ಸಿ ಮೇಟ್ ಪಾಪ್ಯುಲೇಷನ್ ಫಿಗರ್ ಎಂದು ಉತ್ತರದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಎರಡನೆಯದು ಇತ್ತೀಚಿನ ಅಂಕಿ ಅಂಶ ನೋಡಬೇಕು. ಅದರ ಪ್ರಕಾರ ಗದಗ ಬೆಟಗೇರಿಯಲ್ಲಿ ಈಗ ಒಂದು ಲಕ್ಷದ ಮೇಲೆ ಜನಸಂಖ್ಯೆಯಿದೆ. ಪ್ರಿಂಟ್‌ಮಾಡಿ ಕೊಟ್ಟಿರುವ ಅಂಕಿಗಳನ್ನು ನೋಡಿ.

ಶ್ರೀ ಕೋಣಂದೂರು ಲಿಂಗಪ್ಪ.—1971ನೇ ಸೆನ್ಸಸ್ ಪುಸ್ತಕದ 8ನೆಯ ಪುಟ ನೋಡಿ. ಅದರ ಪ್ರಕಾರ ಒಂದು ಲಕ್ಷಕ್ಕಿಂತ ಕಡಿಮೆ ಇದೆ.

ಶ್ರೀ ಡಿ. ದೇವರಾಜ ಅರಸ್.....ನಾವು ಪಡಿತರ ಪದ್ಧತಿ ಜಾರಿಗೆ ತರುವ ಕಾಲದಲ್ಲಿ ಅಲ್ಲಿ ಜನಸಂಖ್ಯೆ ಜಾಸ್ತಿಯಾಗಿತ್ತು.

ಶ್ರೀ ಕೋಣಂದೂರು ಲಿಂಗಪ್ಪ.—ಯಾರಿಗೋ ಹೆದರಿಕೊಂಡು ಕೊಟ್ಟಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—ಕೆ. ಜಿ. ಎಫ್.ನಲ್ಲಿ 76 ಸಾವಿರ ಜನಸಂಖ್ಯೆ ಇದೆ, ಅಲ್ಲಿರುವ ಲೇಬರ್ ಪಾಪ್ಯುಲೇಷನ್ ನೋಡಿ ಅದು ಒಂದು ಲಕ್ಷಕ್ಕೆ ಮೇಲ್ಪಟ್ಟಿರುವುದರಿಂದ ಪಡಿತರ ಪದ್ಧತಿ ಜಾರಿಗೆ ಕೊಡಲಾಗಿದೆಯೆಂದು ಆಹಾರ ಸಚಿವರು ಹೇಳಿದರು. ಆದರೆ ಸೆನ್ಸಸ್ ಪ್ರಕಾರ ಜನಸಂಖ್ಯೆ ಒಂದು ಲಕ್ಷಕ್ಕೆ ಮೀರುವುದಿಲ್ಲ.

ಅಧ್ಯಕ್ಷರು.—1971ರ ಸೆನ್ಸಸ್ ಫಿಗರ್ಸ್ ಹೇಳುತ್ತಿದ್ದೀರಾ ?

ಶ್ರೀ ಜೆ. ಎಲ್. ಕಬಾಡಿ.—ಹೌದು, ಮೊದಲು 1971ರ ಸೆನ್ಸಸ್ ಆಧಾರದ ಮೇಲೆ ಪಡಿತರ ಪದ್ಧತಿ ಜಾರಿಗೆ ತರಲಾಗಿದೆಯೆಂದು ಉತ್ತರ ಕೊಟ್ಟರು. ಆ ಸೆನ್ಸಸ್ ಪ್ರಕಾರ ಕಡಿಮೆ ಜನಸಂಖ್ಯೆಯಿರುವ ಪಟ್ಟಣಗಳಿಗೆ ಪಡಿತರ ಪದ್ಧತಿಯನ್ನು ಅನ್ವಯಿಸಿರುವುದು ಸರಿಯೇ ?

ಶ್ರೀ ಡಿ. ದೇವರಾಜ ಅರಸ್.....ಕೆ. ಜಿ. ಎಫ್.ನಲ್ಲಿ ಹಿಂದಿನಿಂದ ರೇಷನ್ ಕೊಡಲಾಗುತ್ತಿದೆ. Particularly K. G. F. has been treated as a special case for the purposes of giving ration. ಇದನ್ನು ಒಂದು ಸ್ಪೆಷಲ್ ಕೇಸ್ ಎಂದು ಹಿಂದಿನಿಂದ ಪರಿಗಣನ ಮಾಡಲಾಗಿದೆ. ಕೆ. ಜಿ. ಎಫ್.ನಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚಾಗಿ ಲೇಬಲ್ ಪಾಪ್ಯುಲೇಷನ್ ಇದೆ. ಇತ್ತೀಚೆಗೆ ಅಲ್ಲಿಗೆ ಭಾರತ್ ಅರ್ತ್ ಮೂವರ್ಸ್ ಮುಂತಾದ ಇಂಡಸ್ಟ್ರಿಗಳು ಬಂದಿವೆ. ಆದುದರಿಂದ ಅಲ್ಲಿಗೆ ಪಡಿತರ ಪದ್ಧತಿಯನ್ನು ಜಾರಿಗೆ ಕೂಟ್ಟಿದೆ.

1-30 P. M.

ಶ್ರೀ ಸಿ. ಬೈರೇಗೌಡ.—ಕೆ. ಜಿ. ಎಫ್‌ನಲ್ಲಿ ಕಾರ್ಮಿಕರು ಹೆಚ್ಚಾಗಿರುವುದು ಎಲ್ಲರಿಗೂ ಗೊತ್ತಾಗಿರುವ ವಿಚಾರ. ಅಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿಯನ್ನು ಮಾಡಿರುವುದು ಸಂತೋಷದ ವಿಷಯ. ಆದೇ ರೀತಿ ಗದಗಬೆಟಗೇರಿಯಲ್ಲಿ ಎಷ್ಟು ಜನ ಕಾರ್ಮಿಕರು ಇದ್ದಾರೆ ಎನ್ನುವುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಕೇಳಬಹುದು.

ಶ್ರೀ ವಿ. ಎನ್. ಪಾಟೀಲ್.—ಎಲ್ಲಿ ವರ್ಕಿಂಗ್ ಕ್ಲಾಸ್ ಏರಿಯಾ ಇದೆ ಅಂಥ ಕಡೆ ಪಾಪ್ಯುಲೇಷನ್ ಒಂದು ಲಕ್ಷಕ್ಕಿಂತ ಕಡಿಮೆ ಇದ್ದರೂ ಸಹ ಪಡಿತರ ಪದ್ಧತಿಯನ್ನು ಜಾರಿಗೆ ಕೊಡಬೇಕು ಹಟ್ಟಿ ಗೋಲ್ಡ್ ಮೈನ್ಸ್, ಭದ್ರಾವತಿ, ಷಹಾಬಾದ್ ಮುಂತಾದ ಕಡೆಗಳಲ್ಲಿ ವರ್ಕಿಂಗ್ ಕ್ಲಾಸ್ ಜನ ಇದ್ದಾರೆ. ಇದಕ್ಕೆ ತಾವು ತಮ್ಮ ರೂಲ್ಸ್‌ನ್ನು ಸಡಿಲ ಮಾಡಿ ಪಡಿತರ ಪದ್ಧತಿಯನ್ನು ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri D. Devaraj Urs.—There is force in the contention of the Hon. Member. That will also be considered. The objective of the Government is to cover up the weaker sections and the labour class in this informal rationing but unfortunately we are not in a position to cover this entire labour class and weaker sections all at once. That is why, we are saying that by stages we want to introduce informal rationing. That is the policy of the Government.

ಶ್ರೀ ಜೆ. ಎಲ್. ಕಬಾಡಿ.....ಸರ್ಕಾರದವರು ತಮ್ಮ ಧೋರಣೆಯ ಪ್ರಕಾರ ಒಂದು ಲಕ್ಷಕ್ಕೆ ಮೇಲ್ಪಟ್ಟು ಜನಸಂಖ್ಯೆ ಇದ್ದರೆ ಪಡಿತರ ಪದ್ಧತಿಯನ್ನು ಜಾರಿಗೆ ತರುತ್ತಾರೆ. ಇಂಥ ಒಂದು ನಿರ್ಣಯವನ್ನು ಮಾಡಿದಾಗ, ಎಲ್ಲಿ ಲೇಬರ್ ಕ್ಲಾಸ್ ಜಾಸ್ತಿ ಇದೆ ಅಂಥ ಕಡೆಗೂ ಪಡಿತರ ಪದ್ಧತಿಯನ್ನು ಜಾರಿಗೆ ತರುತ್ತೇವೆಂದು

ಹೇಳುವುದು ಸಂತೋಷದ ಸಂಗತಿ. ಬಿಜಾಪುರದಲ್ಲಿ, ಬಡಜನರಿಗಾಗಿ, ಪಿ. ಸಿ. ಸಿ ಯಲ್ಲಿ ಒಂದು ಠರಾವು ಪಾಸು ಮಾಡಿ ಅಲ್ಲಿ ಪಡಿತರ ಪದ್ಧತಿಯನ್ನು ಜಾರಿಗೆ ತನ್ನಿ ಎಂದು ಒತ್ತಾಯ ಮಾಡಿದರೂ ಸಹಿತ, ತಾರೀಖು 7-2-1975ರಂದು ಅಲ್ಲಿ ಒಂದು ದೊಡ್ಡ ಮೆರವಣಿಗೆಯನ್ನು ಅಸಂಖ್ಯಾತ ಜನರು ಮಾಡಿ ಡೆಪ್ಯೂಟಿ ಕಮಿಷನರ್ ಅವರ ಹತ್ತಿರ ಹೋದಾಗ ಅವರು ಸರ್ಕಾರದಿಂದ ಪಡಿತರ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಆಶ್ವಾಸನೆ ಕೊಟ್ಟಿದ್ದರೆ, ಮೇಲೆ ಸರ್ಕಾರವರು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.— ನಮ್ಮಲ್ಲಿರತಕ್ಕ ಬಂಡವಾಳವನ್ನು ನೋಡಿ ಕೊಂಡು ನಾವು ರೇಷನ್ ಅನ್ನು ತರಬೇಕು. ಹಾಗೆ ನೋಡಿದರೆ ಬಿಜಾಪುರದಲ್ಲಿ ಸರ್ಪಲಸ್ ಆಹಾರ ಇದೆ. ಅಲ್ಲಿ ಬೆಳೆಯುತ್ತಿರುವ ಜೋಳ ಎಲ್ಲಾ ಹೊರಗಡೆಗೆ ಹೋಗುತ್ತಿದೆ, ಇಲ್ಲದೇ ಹೋದರೆ ಅಲ್ಲಿ ಯಾವ ತೊಂದರೆಯೂ ಇರುತ್ತಿರಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಅದನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲವೇ

ಶ್ರೀ ಡಿ. ದೇವರಾಜ ಅರಸ್.— ಮೊದಲು ಈ ಕೋರ್ಸ್ ಗ್ರೇನ್ಸ್‌ಗೆ ಝೋನಲ್ ರಿಸ್ಟ್ರಿಕ್ಷನ್ ಇತ್ತು. ಇತ್ತೀಚೆಗೆ ಈ ನೀತಿಯನ್ನು ಬದಲಾವಣೆ ಮಾಡಿ ಬೇರೆ ಸ್ಟೇಟಿಗೂ ಧಾನ್ಯ ಹೋಗಬಹುದು ಎಂದು ಮಾಡಿದ್ದಾರೆ. ಆದರಿಂದ ಇದನ್ನು ತಡೆಗಟ್ಟುವುದು ಕಷ್ಟವಾಗಿದೆ. ಇಲ್ಲದೆ ಹೋಗಿದ್ದರೆ ಬಿಜಾಪುರದಲ್ಲಿ ಸಾಕಷ್ಟು ಜೋಳ ಬೆಳೆಯುತ್ತಾರೆ. ಅಲ್ಲಿ ತೊಂದರೆ ಏನೂ ಇರುತ್ತಿರಲಿಲ್ಲ. ಅಲ್ಲಿ ಬೆಳೆದ ಜೋಳವನ್ನು ಪಕ್ಕದ ಮಹಾರಾಷ್ಟ್ರಕ್ಕೆ ಸಾಗಿಸುತ್ತಾರೆ. ಅಲ್ಲಿ ನಾವು ಪಡಿತರ ಪದ್ಧತಿಯನ್ನು ಇಂಟರ್‌ಡ್ಯೂನ್ ಮಾಡಬೇಕು ಎನ್ನುವುದಾದರೆ ಜವಾಬ್ದಾರಿಯಿಂದ ಸಾಕಷ್ಟು ಗ್ರೇನ್ಸ್ ಅನ್ನು ಸ್ಟಾಕ್ ಇಟ್ಟುಕೊಂಡು ಮಾಡಬೇಕಾಗುತ್ತದೆ. ತಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಜವಾರ್ ಲೆವಿ ಏನು ಇದೆ ಅದನ್ನು ಚೆನ್ನಾಗಿ ಬರುವ ಹಾಗೆ ಮಾಡಿದರೆ ಆಲ್ಲಿಯೂ ಸಹ ಇಂಥ ತೊಂದರೆ ಇರುವುದಿಲ್ಲ.

**Reservation of Vacancies for Women in Government Service*

218 SRI M. H. JAYAPRAKASH NARAYAN (Sirsi) :— Will the Chief Minister be pleased to state —

(*a*) the criterion adopted by the State Government in reserving vacancies for Scheduled Castes and Scheduled Tribes and Backward Classes in Government service;